**ದಿಃ 12.07.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**- ಪಾಟೀ ಸವಾಲು - 2 , 4 ರಿಂದ 11 ಆರೋಪಿಗಳ ಪರವಾಗಿ - ಶ್ರೀ ಬಿ.ಎ.ಕೆ ವಕೀಲರಿಂದ -**

3. ನಮ್ಮ ಜಮೀನಿಂದ ಊರಿಗೆ ಸುಮಾರು 2 ಕಿ ಮಿ ಆಗುತ್ತದೆ . ನಮ್ಮ ಜಮೀನಿಂದ ಪರಮೇಶ್ವರಪ್ಪನ ಜಮೀನಿಗೆ ಸುಮಾರು ಅರ್ಧ ಕಿ ಮಿ ಆಗುತ್ತದೆ . 01.08.2020 ರಂದು ಗಲಾಟೆಯಾಯಿತು . ಗಲಾಟೆ ನಡೆದ ಜಮೀನು ಸರ್ಕಾರಿ ಗುಡ್ಡಕ್ಕೆ ಹೊಂದಿಕೊಂಡು ಇದೆ ಎಂದರೆ ಸರಿಯಲ್ಲ . ನಾವು ಜಮೀನು ಮಾಡುವ ಮೊದಲು ಅದರಲ್ಲಿ ಜನ ಮತ್ತು ಜಾನುವಾರುಗಳ ಓಡಾಡುತ್ತಿದ್ದವು ಎಂದರೆ ಸರಿ . ಮೊದಲಿನಿಂದಲೂ ಅದು ಬೀಳು ಬಿಟ್ಟಿದ್ದು ಜನ ಮತ್ತು ಜಾನುಮಾರುಗಳನ್ನು ಓಡಾಡಲು ಉಪಯೋಗಿಸುತ್ತಿದ್ದರು ಎಂದರೆ ಸರಿ . ನಾವು ಜಮೀನು ಮಾಡುವ ಮೊದಲು ಸರಾಗವಾಗಿ ಜಮೀನಲ್ಲಿ ಓಡಾಡುತ್ತಿದ್ದರು .ಎಂದರೆ ಸಾಕ್ಷಿ ಜಮೀನಿನ ಪಕ್ಕದಲ್ಲಿ ಓಡಾಡುತ್ತಿದ್ದರು ಎನ್ನುತ್ತಾರೆ . ಆ ಜಮೀನಿಗೆ ಆರೋಪಿಗಳು ಅಕ್ರಮ ಪ್ರವೇಶ ಮಾಡಿದರು ಎಂದು ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

4. ಸುಮಾರು ಅರ್ಧ ಗಂಟೆ ಗಲಾಟೆಯಾಯಿತು . 3 ಸಾವಿರ ಅಡಿಕೆ ಮರಗಳನ್ನು ಕಿತ್ತರು . ಅವು 5 ವರ್ಷದ ಅಡಿಕೆ ಗಿಡಗಳು . ಚಾಸಾ 07 ನನ್ನ ಮಾವ . ಚಾಸಾ -10 ನನ್ನ ಗಂಡ . ಚಾಸಾ 15 ನನ್ನ ಮೈದುನ . ನಾನು ಗಲಾಟೆಯಾಯಿತು ಎಂದು ಹೇಳಿದ ದಿನ ಚಿತ್ತಪ್ಪ ಎನ್ನುವವರು ಚಾಸಾ 7, 10, 15 ರವರ ವಿರುದ್ಧ ದೂರು ನೀಡಿದ್ದರು ಎಂದರೆ ಸರಿ . ಜಮೀನಲ್ಲಿ ಕುರಿಗಳು ಓಡಾಡುವ ವಿಚಾರದಲ್ಲಿ ಚಾಸಾ 7, 10, 15 ಚಿತ್ತಪ್ಪನಿಗೆ ಹೊಡೆದರು ಎನ್ನುವ ವಿಚಾರದಲ್ಲಿ ಸದರಿ ಪ್ರಕರಣ ದಾಖಲಾಗಿದ್ದು ಅದು ಹೊಳಲ್ಕೆರೆ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿ ಇದೆ ಎಂದರೆ ಸರಿ .

ನನ್ನ ಗಂಡನ ವಿರುದ್ಧ ದೂರು ನೀಡಿವ ವಿಚಾರ ನನಗೆ ಆ ದಿನ ಸಂಜೆ 6 ಗಂಟೆಗೆ ಗೊತ್ತಾಯಿತು . ಚಾಸಾ 12, 13 ನನ್ನ ಮಕ್ಕಳು . ಅವರು ಶಾಲೆಗೆ ಹೋಗುತ್ತಾರೆ .

5. ಆರೋಪಿಗಳೆಲ್ಲರೂ ಗುಂಪು ಕಟ್ಟಿಕೊಂಡು ಏಕಾಏಕಿ ನನ್ನ ಗಂಡನಿಗೆ ಹೊಡೆದರು . ಒಟ್ಟು 18 ಜನ ಇದ್ದರು , ಅದರಲ್ಲಿ ಕೆಲವರು ನ್ಯಾಯಾಲಯದಲ್ಲಿ ಇಲ್ಲ . 50 ಜನ ಗುಂಪು ಕಟ್ಟಿಕೊಂಡು ನನ್ನನ್ನು ಎಳೆದಾಡಿ , ಸೀರೆ , ಚಾಕೀಟು ಎಳೆದಾಡಿದರು . ಗುಂಪಿನಲ್ಲಿ ಯಾರು ಹಿಡಿದು ಎಳೆದಾಡಿದರು ಎಂದು ಹೇಗೆ ಹೇಳಲಿ . ಗುಂಪಿನಲ್ಲಿ ಯಾರು ಜಾತಿ ನಿಂದನೆ ಮಾಡಿದರು ಎಂದು ನನಗೆ ಹೇಳಲು ಆಗುವುದಿಲ್ಲ . ದೂರನ್ನು ಮಹಜರ್ ಕಾಲದಲ್ಲಿ ಹೊಲದಲ್ಲಿ ಬರೆಸಿರುತ್ತೇನೆ . ಪೋಲೀಸರು ದೂರನ್ನು ಬರೆದುಕೊಂಡಿದ್ದು ನಾನು ಸಹಿ ಮಾಡಿರುತ್ತೇನೆ . ಸುಮಾರು 1 ಗಂಟೆ ಅಡಿಕೆ ಮರಗಳನ್ನು ಕಿತ್ತರು . ಸದರಿ ಘಟನೆಯಲ್ಲಿ ನನ್ನ ಎಡಗೈ ಗೆ ಸ್ವಲ್ಪ ಏಟಾಗಿತ್ತು . ಕೂಡಲೇ ನಾನು ಚಿತ್ರಹಳ್ಳಿ ಪೋಲೀಸ್ ಠಾಣೆಗೆ ಹೋಗಿ ಅಲ್ಲಿಂದ ಚಿತ್ರದುರ್ಗಕ್ಕೆ ಬಂದೆ . ನಾವೇ ಸ್ವ ಇಚ್ಚೆಯಿಂದ ಚಿತ್ರದುರ್ಗಕ್ಕೆ ಬಂದೇವು . ಚಿತ್ರಹಳ್ಳಿಯಲ್ಲಿ ಸರ್ಕಾರಿ ಆಸ್ಪತ್ರೆ ಇದೆ ಎಂದರೆ ಸರಿ . ಹೊಳಲ್ಕೆರೆ ಚಿತ್ರಹಳ್ಳಿಗೆ ಚಿತ್ರದುರ್ಗಕ್ಕಿಂತ ಹತ್ತಿರವಾಗುತ್ತವೆ ಎಂದರೆ ಸರಿ . ಚಾಸಾ 10 , 11 , 12 , 13 ರವರಿಗೂ ಏಟಾಯಿತು . ನನ್ನ ಎಡ ಗೈ ಮೇಲೆ ರಕ್ತ ಬರುವಂತ ಗಾಯವಾಗಿತ್ತು . ನಮ್ಮೆಲ್ಲರ ಬಟ್ಟೆಯೂ ರಕ್ತವಾಗಿತ್ತು . ಚಿತ್ರದುರ್ಗ ಆಸ್ಪತ್ರೆಗೆ ಬಂದಾಗ 6.00 ಗಂಟೆಯಾಗಿತ್ತು . ನಾವೇ ಸ್ವತಃ ಚಿತ್ರದುರ್ಗಕ್ಕೆ ಬಂದಿದ್ದು ನಮ್ಮನ್ನು ಯಾರು ಕರೆದುಕೊಂಡು ಬರಲಿಲ್ಲ . ನಮಗೆ ಹೊಡೆತ ಬಿದ್ದ ಕೂಡಲೇ ದೂರು ನೀಡಿ ಆಸ್ಪತ್ರೆಗೆ ಬಂದೇವು . ಚಿತ್ರಹಳ್ಳಿ ಠಾಣೆಗೆ ಹೋದಾಗ ಸಂಜೆ 5.00 ಗಂಟೆಯಾಗಿತ್ತು . ಯಾರು ಯಾವುದರಿಂದ ಹಲ್ಲೆ ಮಾಡಿದರು ಎಂದು ವೈದ್ಯರ ಬಳಿ ಹೇಳಿದ್ದೇನೆ . ಅಡಿಕೆ ಗಿಡಕೆ ಮತ್ತು ಮನೆಗೆ ಬೆಂಕಿ ಇಟ್ಟರು ಎನ್ನುವ ವಿಚಾರ ಮಹಜರ್ ಕಾಲದಲ್ಲಿ ನನಗೆ ಗೊತ್ತಾಯಿತು . ನನ್ನ ಮೈದುನನ ಹೆಂಡತಿ ಪೋಲೀಸರಿಗೆ ಅದನ್ನೆಲ್ಲಾ ತೋರಿಸಿದರು . ರಾತ್ರಿ 9 ಗಂಟೆಗೆ ನಮ್ಮನ್ನು ಹೊಲಕ್ಕೆ

ಕರೆದುಕೊಂಡು ಹೋದರು . ಆಗ ಕತ್ತಲಾಗಿತ್ತು ಎಂದರೆ ಸರಿ . ನಾವು ಹೋದಾಗ ಸದರಿ ಜಾಗದಲ್ಲಿ ಪೋಲೀಸರು ಮಹಜರ್ ಮಾಡಿಕೊಂಡು ಬಂದಿದ್ದರು . ನಾವು ಹೋದ ನಂತರ ಜಮೀನಿನಲ್ಲಿ ಪೋಟೋ ತೆಗೆದುಕೊಂಡು ಸಹಿ ಪಡೆದುಕೊಂಡರು . ಬರವಣಿಗೆ ಮಾಡಲು ತಿಮ್ಮಕ್ಕ ಮಾಹಿತಿ ನೀಡಿದರು . ಸದರಿ ಮಹಜರ್ ನಲ್ಲಿ ಏನು ಚಕ್ಕುಬಂದಿ ಬರೆದಿದ್ದಾರೆ ಎಂದು ನನಗೆ ಹೇಳಲು ಅಗುವುದಿಲ್ಲ ಎಂದರೆ ಸರಿ . ಮರಗಳನ್ನು ಕೈಯಿಂದ ಕೀಳಲು ಅಗುವುದಿಲ್ಲ ಎಂದರೆ ಸಾಕ್ಷಿ ಕೊಡಲಿ , ಮಚ್ಚಿನಿಂದ ಕಡಿದಿದ್ದಾರೆ ಎನ್ನುತ್ತಾರೆ . ಈ ಎಲ್ಲಾ ವಿಚಾರವನ್ನೆ ನಾನೇ ಬರೆದುಕೊಟ್ಟಿದ್ದೇನೆ . ಮಚ್ಚು ಕೊಡಲಿಯಿಂದ ಮರವನ್ನುಕಡಿದಿದ್ದಾರೆ ಎಂದು ನಾನು ಅದರಲ್ಲಿ ಹೇಳಿದ್ದೇನೆ . ಒಂದು ದಿನ ಚಿತ್ರದುರ್ಗಕ್ಕೆ ನನ್ನನ್ನು ಸಬ್ ಇನ್ಸ್ಪೆಕ್ಟರ್ ಕರೆಯಿಸಿದ್ದರು .

6. ಆರೋಪಿಗಳೆಲ್ಲಾ ಅಡಿಕೆ ಗಿಡಗಳನ್ನುಕತ್ತರಿಸಿ ನಮಗೆ ಹಲ್ಲೆ ಮಾಡಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರು ನಮ್ಮನ್ನು ಕರೆಯಿಸಿ ಪೋಟೋ ತೆಗೆದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಆಸ್ಪತ್ರೆಗೆ ಹೋದ ದಿನದಿಂದ 3 ದಿನ ಒಳರೋಗಿಯಾಗಿ ಇದ್ದೆ . ಉಳಿದ ಗಾಯಾಳುಗಳು 5 ದಿನ ಆಸ್ಪತ್ರೆಯಲ್ಲಿ ಇದ್ದರು . ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಮೊದಲಿನಿಂದಲೂ ದೌರ್ಜನ್ಯ ಮಾಡುತ್ತಿದ್ದರು ಎನ್ನುವ ಬಗ್ಗೆ ನಾನು ಈ ಮೊದಲು ದೂರು ನೀಡಿರಲಿಲ್ಲ . ಆ ದಿನ ಚಿತ್ರಹಳ್ಳಿಗೆ ಹೋಗಿ ದೂರುನೀಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಚಾಸಾ 2 ನನ್ನ ಮೈದುನಾ , ಚಾಸಾ 3 ನನ್ನ ಮಾವ , ಚಾಸಾ 4 ನನ್ನ ಅಳಿಯ , ಚಾಸಾ 5 ನನ್ನ ಅಣ್ಣ , ಚಾಸಾ –6 ನನ್ನ ಅಳಿಯ , ಚಾಸಾ 8 ನನ್ನ ತಂಗಿ , ಚಾಸಾ 9 ನನ್ನ ಮಗಳು .

7. ಆರೋಪಿಗಳು ನಮ್ಮ ಜಮೀನಿಗೆ ಅಡ್ಡಿ ಪಡಿಸಿದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳಿಗೆ ಚಾಸಾ 7, 10, 15 ಹಲ್ಲೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಿಚಾರದಲ್ಲಿ ಅದೇ ದಿನ 4 ಗಂಟೆಗೆ ಆರೋಪಿಗಳು ಚಾಸಾ 7, 10 , 15 ರವರ ವಿರುದ್ಧ ದೂರು ನೀಡಿದರು ಎಂದರೆ ಸಾಕ್ಷಿ ಅವರು ಸುಳ್ಳು ಹೇಳುತ್ತಾರೆ ಎನ್ನುತ್ತಾರೆ . ಅವರು ದೂರು ಕೊಟ್ಟಿದ್ದನ್ನು ತಿಳಿದುಕೊಂಡು ನಾನು ಈ ದೂರನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಅಡಿಗೆ ಮರಗಳು ಇಲ್ಲ ಎಂದರೆ ಸಾಕ್ಷಿ ಅಡಿಕೆ ಸಸಿಗಳನ್ನು ತಂದರು ಎನ್ನುತ್ತಾರೆ . ಮು.ಮಾ.– 1 ರಿಂದ 13 ನ್ನು ಪೋಲೀಸರೆ ತೆಗೆದುಕೊಂಡು ಬಂದರು . ನಾನು ಮಹಜರ್ ಕಾಲದಲ್ಲಿ ಹೇಳಿದ್ದನ್ನು ಪೋಲೀಸರು ಆರಿಸಿಕೊಂಡು ಬಂದರು . ಯಾವುದೇ ಗಲಾಟೆಯಾಗದೇ ಇದ್ದರೂ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.– 1 ರಿಂದ 13 ನ್ನು ವಶಪಡಿಸಿಕೊಂಡರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(1 ಮತ್ತು 3 ನೇ ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು ಪಾಟೀ ಸವಾಲು ಇಲ್ಲವೆಂದು ಪರಿಗಣಿಲಾಯಿತು . )**

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

*ಓದಿ ಹೇಳಿ ಕೇಳಿ ಸರಿ ಇದೆ.*

ವಿಶೇಷ, 2 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಚಿತ್ರದುರ್ಗ.